**ದಿನಾಂಕಃ 22-12-2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್ ವಿ ಎನ್ ರವರಿಂದ**

3. ನನ್ನ ಸಮಕ್ಷಮದಲ್ಲಿ ಯಾವುದೇ ಪ್ರಾಯೋಗಿಕ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಫಿರ್ಯಾದಿ ಯಾವುದೇ ನೋಟುಗಳನ್ನು ನನ್ನ ಸಮಕ್ಷಮದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆ ನೋಟುಗಳಿಗೆ ಫಿನಾಪ್ತಲಿನ್ ಪುಡಿ ಸವರಲಿಲ್ಲ ಎಂದರೆ ಸರಿಯಲ್ಲ. ಸೋಡಿಯಂ ಕಾರ್ಬೋನೇಟ್ ಧ್ರಾವಣವನ್ನು ತಯಾರು ಮಾಡಿಲ್ಲ ಎಂದರೆ ಸರಿಯಲ್ಲ. ಯಾವುದೇ ರಾಸಾಯನಿಕ ಪ್ರಯೋಗ ಮಾಡಲಿಲ್ಲ ಮತ್ತು ಧ್ರಾವಣ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಗಲಿಲ್ಲ ಎಂದರೆ ಸರಿಯಲ್ಲ. ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ ತನಿಖಾಧಿಕಾರಿ ವಶಪಡಿಸಿಕೊಂಡಿದ್ದಾರೆ. ನೋಟುಗಳನ್ನು ಇರಿಸಿದ್ದ ಲಕೋಟೆಯನ್ನು ಟ್ರ್ಯಾಪ್ ಪಂಚನಾಮೆ ಸಮಯದಲ್ಲಿ ವಶಪಡಿಸಿಕೊಂಡಿಲ್ಲ. ಆ ಲಕೋಟೆ ಏನಾಯಿತು ಎಂದು ಟ್ರ್ಯಾಪ್ ಪಂಚನಾಮೆಯಲ್ಲಿ ಬರೆದಿಲ್ಲ. ಆ ಲಕೋಟೆಯನ್ನು ಫಿರ್ಯಾದಿ ಪಂಚ-1 ರವರ ಕೈಯಲ್ಲಿ ಕೊಟ್ಟಿರುತ್ತಾರೆ ಎಂದು ಸಾಕ್ಷಿ ಸ್ವತಃ ನುಡಿದಿರುತ್ತಾರೆ. ಲಕೋಟೆಯಲ್ಲಿ ಹಣವನ್ನು ಇರಿಸಿ ಕೊಟ್ಟ ಬಗ್ಗೆ ಪಂಚನಾಮೆಯಲ್ಲಿ ಬರೆದಿದ್ದಾರೆ. ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ಯಾವುದೇ ಛಾಯಾಚಿತ್ರ ತೆಗೆದಿಲ್ಲ ಎಂದರೆ ಸರಿಯಲ್ಲ. ಟ್ರ್ಯಾಪ್ ಪಂಚನಾಮೆಗೆ ಹೋಗುವ ಮುನ್ನ ಏನೇನು ವಸ್ತುಗಳನ್ನು ತೆಗೆದುಕೊಂಡು ಹೋದೆವು ಎಂದು ಪಟ್ಟಿ ಮಾಡಿದ್ದಾರಾ ಎಂದರೆ ಅದನ್ನು ನಮೂದಿಸಿರುತ್ತಾರೆ. ಆ ಪಟ್ಟಿಯಲ್ಲಿ ಗಣಕಯಂತ್ರ , ಅದರ ಪರಿಕರಗಳು , ಲ್ಯಾಪಟಾಪ್ , ಸೋಡಿಯಂ ಕಾರ್ಬೋನೇಟ್ , ಫಿನಾಪ್ತಲಿನ್ , ಭಟ್ಟಿ ಇಳಿಸಿದ ನೀರು ತೆಗೆದುಕೊಂಡು ಹೋದ ಬಗ್ಗೆ ಬರೆದಿದ್ದಾರೆ. ಆ ವಸ್ತುಗಳ ಪಟ್ಟಿಗೆ ನಾನು ಸಹಿ ಮಾಡಿಲ್ಲ.

4. ಟ್ರ್ಯಾಪ್ ಕಾರ್ಯಾಚರಣೆಗೆ ಆರೋಪಿ ಕಚೇರಿಗೆ 18.30 ಗಂಟೆಗೆ ತಲುಪಿದೆವು. ಟ್ರ್ಯಾಪ್ ಪಂಚನಾಮೆಯನ್ನು 15.00 ಗಂಟೆಯಿಂದ 16.30 ಗಂಟೆವರೆಗೆ ಮಾಡಿದ್ದಾರೆ . ಒಂದುವರೆ ತಾಸು ಟ್ರ್ಯಾಪ್ ಪಂಚನಾಮೆ ಬರೆದಿದ್ದಾರಾ ಎಂದರೆ ಹೌದು. ಟ್ರ್ಯಾಪ್ ಪಂಚನಾಮೆಯನ್ನು ನಮ್ಮ ಠಾಣೆಯಲ್ಲಿ ಬರೆಯಲು ಪ್ರಾರಂಭಿಸಿ ಠಾಣೆಯಲ್ಲಿಯೇ ಮುಗಿಸಿರುತ್ತಾರೆ ಎಂದು ಸಾಕ್ಷಿ ಉತ್ತರಿಸಿ ನಂತರ ಟ್ರ್ಯಾಪ್ ಪಂಚನಾಮೆಯನ್ನು 20.40

ಗಂಟೆಯಿಂದ ಕುಮಟಾ ಪ್ರವಾಸಿ ಮಂದಿರದಲ್ಲಿ ಪ್ರಾರಂಭಿಸಿ ಮಾರನೇ ದಿನ ರಾತ್ರಿ 1.00 ಗಂಟೆಗೆ ಪ್ರವಾಸಿ ಮಂದಿರದಲ್ಲಿ ಮುಗಿಸಿರುತ್ತಾರೆ , ಪ್ರಾಯೋಗಿಕ ಪಂಚನಾಮೆಯನ್ನು ಠಾಣೆಯಲ್ಲಿಯೇ ಪ್ರಾರಂಭಿಸಿ ಠಾಣೆಯಲ್ಲಿಯೇ ಮುಗಿಸಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಆರೋಪಿ ಕಚೇರಿ ಬಳಿ 18.30 ಗಂಟೆಗೆ ತಲುಪಿದ ಮೇಲೆ 20.40 ಗಂಟೆವರೆಗೆ ಯಾವುದೇ ಬರವಣಿಗೆ ಮಾಡಿರುವುದಿಲ್ಲ. ಆರೋಪಿ ಸಂಜೆ 18.30 ಗಂಟೆಗೆ ಅವನ ಕಚೇರಿಯಿಂದ ಹೋದ ಮೇಲೆ ಅವನನ್ನು ರಾತ್ರಿ 20.40 ಗಂಟೆಗೆ ದಸ್ತಗಿರಿ ಮಾಡಲಾಗಿರುತ್ತದೆ . ಆರೋಪಿ ಕಚೇರಿಯಿಂದ ಹೋದ ಮೇಲೆ ಅವನನ್ನು ಹಿಡಿಯಲು ಅವನು ಕಚೇರಿಯಿಂದ ಹೋದ ಮೇಲೆ 2.10 ಗಂಟೆ ಅವಧಿಯನ್ನು ತೆಗೆದುಕೊಂಡಿದ್ದೇವಾ ಎಂದರೆ ಅವನನ್ನು 20.40 ಗಂಟೆಗೆ ದಸ್ತಗಿರಿ ಮಾಡಲಾಗಿರುತ್ತದೆ . ಅಂದರೆ 2.10 ಗಂಟೆ ಅವಧಿ ತೆಗೆದುಕೊಳ್ಳಲಾಗಿರುತ್ತದೆ . ಆರೋಪಿ ಕಚೇರಿಯಿಂದ ಶಾಂತಿಕಾ ಪರಮೇಶ್ವರಿ ದೇವಸ್ಥಾನ ಒಂದುವರೆ ಎರಡು ಕಿ.ಮೀ. ದೂರ ಆಗುತ್ತದೆ . ಆರೋಪಿ ಕಚೇರಿಯಿಂದ ದಕ್ಷಿಣ ದಿಕ್ಕಿಗೆ ಆ ದೇವಸ್ಥಾನ ಇದೆ . ಆರೋಪಿ ಕಚೇರಿಯಿಂದ ಕೆಳಗಡೆ ಹೋಗಿ ಎಡಕ್ಕೆ ತಿರುಗಿದರೆ ಆ ದೇವಸ್ಥಾನ ಸಿಗುತ್ತದೆಯಾ ಎಂದರೆ ಸರಿಯಾಗಿ ಗೊತ್ತಿಲ್ಲ. ಆರೋಪಿ ಕಚೇರಿಯಿಂದ ಆ ದೇವಸ್ಥಾನಕ್ಕೆ ಹೋಗಲು ಜೀಪ್ ನಲ್ಲಿ ಅಥವಾ ಬೈಕ್ ನಲ್ಲಿ ಹೋದರೆ 15-20 ನಿಮಿಷದಲ್ಲಿ ತಲುಪಬಹುದು . ಆ ದಿನ ಆರೋಪಿ ತನ್ನ ಕಚೇರಿಯಿಂದ ಓಡಿ ಹೋದಾಗ ಅವನು ಹೋದ ಕಡೆ ಎಲ್ಲಾ ಹಿಂಬಾಲಿಸಿಕೊಂಡು ಹೋದೆವಾ ಎಂದರೆ ಅವನನ್ನು ಹುಡುಕಾಡುತ್ತಿದ್ದೆವು . ಆರೋಪಿ ಹೋದ ಕಡೆ ಎಲ್ಲಾ ನಾವು ಹೋಗಿದ್ದೆವಾ ಎಂದರೆ ಹೌದು . ಆರೋಪಿ ಯಾವ ಯಾವ ಮುಖ್ಯ ಸ್ಥಳಗಳ ಮೂಲಕ ಆ ದೇವಸ್ಥಾನದ ಹತ್ತಿರ ಹೋದ ಎಂದರೆ ಸರಿಯಾಗಿ ಗೊತ್ತಿಲ್ಲ. ಆರೋಪಿ ಬೈಕ್ ನಲ್ಲಿ ಹೋದ ಮೇಲೆ ಶಾಂತಿಕಾ ಪರಮೇಶ್ವರಿ ದೇವಸ್ಥಾನದ ಬಳಿ ತಲುಪಲು ಎಷ್ಟು ಸಮಯ ತೆಗೆದುಕೊಂಡ ಎಂದು ಗೊತ್ತಿಲ್ಲ. ಆರೋಪಿ ಆ ದಿನ ಎಲ್ಲೆಲ್ಲಿ ಹೋದ ಎಂದು ಪಂಚನಾಮೆಯಲ್ಲಿ ನಮೂದು ಮಾಡಿಲ್ಲ. ಆರೋಪಿಯನ್ನು ನಾವು ಹುಡುಕಾಡಿದೆವು ಎಂದು ಪಂಚನಾಮೆಯಲ್ಲಿ ಬರೆದಿದ್ದಾರೆ. ಪಂಚನಾಮೆಗೆ ನಾನು ಸಹಿ ಮಾಡಿಲ್ಲ. ಪಂಚನಾಮೆಯಲ್ಲಿ ಆರೋಪಿಯನ್ನು ಕುಮಟಾ ಪಟ್ಟಣದಲ್ಲೆಲ್ಲಾ ಬೆನ್ನಟ್ಟಿ ಕೊನೆಗೆ ಕುಮಟಾ ಶಹರದ ಹೆರವಟ್ಟಾದ ಶಾಂತಿಕಾ ಪರಮೇಶ್ವರಿ ದೇವಸ್ಥಾನಕ್ಕೆ ಹೋಗುವ ರಸ್ತೆಯಲ್ಲಿ ಅಡ್ಡ ಹಾಕಿ ಹಿಡಿದೆವು ಎಂದು ಬರೆದಿದ್ದಾರೆ ಎಂದರೆ ಹೌದು .

ಬೆನ್ನಟ್ಟಿ ಹೋಗುವುದು ಎಂದರೆ ಆರೋಪಿ ಎಲ್ಲಿ ಹೋಗುತ್ತಾನೋ ಅಲ್ಲಿ ಹಿಂಬಾಲಿಸಿ ಹೋಗುವುದು ಎಂಬರ್ಥ ಆಗಿದೆ ಎಂದರೆ ಹೌದು . ನಾನು ಜೀಪ್ ನಲ್ಲಿ ಹೋಗಿದ್ದೆ . ಆರೋಪಿಯನ್ನು ಎರಡು ಜೀಪ್ ನಲ್ಲಿ ಬೆನ್ನಟ್ಟಿ ಹೋದೆವು. ಫಿರ್ಯಾದಿ ಬೈಕ್ ನಲ್ಲಿ ಹೋಗಲಿಲ್ಲ ನಮ್ಮ ಜೀಪ್ ನಲ್ಲಿ ಆಗ ಬಂದಿದ್ದ. ಫಿರ್ಯಾದಿ ಇದ್ದ ಜೀಪ್ ನಲ್ಲಿ ಯಾರು ಯಾರು ಇದ್ದರು ಎಂದು ನೆನಪಿಲ್ಲ. ನಾನು ಫಿರ್ಯಾದಿ ಇದ್ದ ಜೀಪ್ ನಲ್ಲಿ ಇರಲಿಲ್ಲ. ಫಿರ್ಯಾದಿ ಇದ್ದ ಜೀಪ್ ನಲ್ಲಿ ಪಂಚರು ಇದ್ದರಾ ಎಂದರೆ ಹೌದು. ಆರೋಪಿಯನ್ನು ಬೆನ್ನಟ್ಟುವಾಗ ಯಾವ ಜೀಪ್ ನಲ್ಲಿ ಯಾರು ಯಾರು ಇದ್ದರು ಎಂದು ಪಂಚನಾಮೆಯಲ್ಲಿ ಬರೆದಿದ್ದಾರಾ ಎಂದರೆ ನೆನಪಿಲ್ಲ. ಆರೋಪಿಯನ್ನು ಪ್ರಪ್ರಥಮವಾಗಿ ಬೆನ್ನಟ್ಟಿ ಹೋದಾಗ ಆರೋಪಿ ನಮಗೆ ಕಾಣುತ್ತಿದ್ದನಾ ಎಂದರೆ ನೆನಪಿಲ್ಲ. ಆರೋಪಿಯನ್ನು ಹಿಡಿಯುವುದಕ್ಕೆ ಮೊದಲು ಅವನು ಬೈಕ್ ನಲ್ಲಿ ಹೋಗುವುದನ್ನು ನಾನು ನೋಡಲಿಲ್ಲ . ಫಿರ್ಯಾದುದಾರ ಸ್ಥಳದಲ್ಲಿ ಆರೋಪಿಯನ್ನು ತೋರಿಸಿದ ಮೇಲೆ ನಾನು ಅಲ್ಲಿ ಆರೋಪಿಯನ್ನು ನೋಡಿರುತ್ತೇನೆ. ಮಧ್ಯದಲ್ಲಿ ಆರೋಪಿಯನ್ನು ಹಿಡಿಯುವವರೆಗೆ ಆರೋಪಿಯನ್ನು  ನಾನು ನೋಡಲಿಲ್ಲ. ಬೆನ್ನಟ್ಟುವಾಗ ನನ್ನ ಜೊತೆ ಇದ್ದ ಬೇರೆ ಪೊಲೀಸ್ ನವರು ಆರೋಪಿಯನ್ನು ನೋಡಿದ್ದಾರಾ ಎಂದರೆ ಗೊತ್ತಿಲ್ಲ. ನಮಗೆ ಯಾರಿಗೂ ಆರೋಪಿ ಇಂತಹದ್ದೇ ಕಡೆ ಹೋಗುತ್ತಾನೆ ಎಂದು ಗೊತ್ತಿರಲಿಲ್ಲ . ಆರೋಪಿ ಹೊರಟ ಮೇಲೆ ಅವನನ್ನು ಹಿಡಿಯುವವರೆಗೆ ಎಷ್ಟು ಹೊತ್ತು ನಮ್ಮ ಜೀಪ್ ಅನ್ನು ಚಲಾಯಿಸಿದರು ಎಂದರೆ ಸರಿಯಾಗಿ ನೆನಪಿಲ್ಲ. ಆರೋಪಿಯನ್ನು ಬೆನ್ನಟ್ಟಿ ಹೋಗುವಾಗ ಜೀಪ್ ಅನ್ನು ಎಲ್ಲಿಯಾದರೂ ನಿಲ್ಲಿಸಿದ್ದೆವಾ ಮತ್ತು ನಿಲ್ಲಿಸಿದ್ದರೆ ಎಷ್ಟು ಕಡೆ ನಿಲ್ಲಿಸಿದ್ದೆವು ಎಂದರೆ ನೆನಪಿಲ್ಲ. ನಾನು 24 ವರ್ಷಗಳಿಂದ ಸರ್ಕಾರಿ ಸೇವೆಯಲ್ಲಿ ಇದ್ದೇನೆ. ನನಗೆ ಮರೆವಿನ ಕಾಯಿಲೆ ಇಲ್ಲ. ಉತ್ತರ ನೀಡಿದರೆ ಎಲ್ಲಿ ಸಿಕ್ಕಿ ಹಾಕಿಕೊಳ್ಳುತ್ತೇನೋ ಎಂದು ನೆನಪಿಲ್ಲ ಎಂದು ಅಡ್ಡಗೋಡೆ ಮೇಲೆ ದೀಪ ಇಡುವಂತೆ ಉತ್ತರ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ಬೆನ್ನಟ್ಟಿ ಹೋಗುವಾಗ ನಾನು ಇದ್ದ ಜೀಪು ಮೊದಲು ಇರಲಿಲ್ಲ ಫಿರ್ಯಾದಿ ಇದ್ದ ಜೀಪು ಮುಂದೆ ಇತ್ತು .

5. ಆರೋಪಿ ಕಚೇರಿಗೆ ಸಂಜೆ 6.30 ಗಂಟೆಗೆ ಫಿರ್ಯಾದಿ ಹೋದಾಗ ನಾನು ಪಂಚಾಯತಿಯ ಬಲಗಡೆ ಇರುವ ಕಂಪೌಂಡ್ ಎದುರುಗಡೆ ನಿಂತಿದ್ದೆ. ಕಂಪೌಂಡ್ ಎದುರುಗಡೆ ಸುಮಾರು 100 ಮೀಟರ್ ದೂರದಲ್ಲಿ ಇದ್ದೆವು . ಅದು ಕಂಪೌಂಡ್ ಹೊರಗಡೆ ಆಗಿರುತ್ತದೆ .

ತನಿಖಾಧಿಕಾರಿ ಮತ್ತು ಪಂಚ–2 ರವರು ಪಂಚಾಯತಿ ಕಚೇರಿಯ ಎದುರುಗಡೆ ನಿಂತಿದ್ದರು. ಕಂಪೌಂಡ್ ಗೇಟಿನ ಎದುರುಗಡೆ ನಿಂತಿದ್ದರು. ಪಂಚ–1 ಮತ್ತು ಫಿರ್ಯಾದಿ ಆರೋಪಿಯ ಕಚೇರಿ ಒಳಗಡೆ ಹೋಗಿದ್ದರು. ನಾನು ನಿಂತಿದ್ದ ಜಾಗದಿಂದ ಫಿರ್ಯಾದಿ , ಪಂಚ–1 ಮತ್ತು ಆರೋಪಿ ನಿಂತ ಅಥವಾ ಕುಳಿತ ಜಾಗ ಕಾಣಿಸುತ್ತಿರಲಿಲ್ಲ. ಪಂಚ–1 ರವರು ಫಿರ್ಯಾದಿಯಿಂದ ಎಷ್ಟು ದೂರದಲ್ಲಿ ನಿಂತಿದ್ದ ಎಂದು ನನಗೆ ಹೇಳಲು ಆಗುವುದಿಲ್ಲ. ಪಂಚ–1 ಫಿರ್ಯಾದಿಯಿಂದ ಎಷ್ಟು ದೂರದಲ್ಲಿ ನಿಂತಿದ್ದ ಎಂದು ಪಂಚನಾಮೆಯಲ್ಲಿ ಬರೆದಿದ್ದಾರಾ ಎಂದರೆ ಇಲ್ಲ. ನಕಾಶೆ ತಯಾರಿಸಿದಾಗ ನಾನು ಇರಲಿಲ್ಲ.

6. ಆರೋಪಿಯನ್ನು ಶಾಂತಿಕಾ ಪರಮೇಶ್ವರಿ ದೇವಸ್ಥಾನದ ರಸ್ತೆಯಲ್ಲಿ ಹಿಡಿದ ಜಾಗದಿಂದ ಪ್ರವಾಸಿ ಮಂದಿರ ಒಂದುವರೆಯಿಂದ ಎರಡು ಕಿ.ಮೀ. ದೂರದಲ್ಲಿ ಇದೆ . ಆರೋಪಿಯನ್ನು ಹಿಡಿದ ಜಾಗದಿಂದ ಪ್ರವಾಸಿ ಮಂದಿರಕ್ಕೆ ಜೇಪ್ ನಲ್ಲಿ ಹೋದೆವು . ಆಗ ಆರೋಪಿ ನಾನು ಇದ್ದ ಜೇಪ್ ನಲ್ಲಿ ಇರಲಿಲ್ಲ ತನಿಖಾಧಿಕಾರಿ ಇದ್ದ ಜೇಪ್ ನಲ್ಲಿ ಇದ್ದ. ಫಿರ್ಯಾದಿ ಸಹ ಆಗ ತನಿಖಾಧಿಕಾರಿ ಇದ್ದ ಜೇಪ್ ನಲ್ಲಿ ಇದ್ದ. ತನಿಖಾಧಿಕಾರಿ ಜೇಪ್ ನಲ್ಲಿ ಬೇರೆ ಯಾರು ಇದ್ದರು ಎಂದು ಗೊತ್ತಿಲ್ಲ. ತನಿಖಾಧಿಕಾರಿ ಜೇಪ್ ನಲ್ಲಿ ಯಾರು ಯಾರು ಇದ್ದರು ಎಂದು ಪಂಚನಾಮೆಯಲ್ಲಿ ಬರೆದಿಲ್ಲ. ಪಂಚನಾಮೆಯಲ್ಲಾಗಲಿ ಅಥವಾ ನನ್ನ ಹೇಳಿಕೆಯಲ್ಲಾಗಲಿ ಯಾವ ಯಾವ ಜಾಗದಲ್ಲಿ ಆರೋಪಿಯನ್ನು ಹಿಂಬಾಲಿಸಿದೆವು ಎಂದು ಹೇಳಿದ್ದೆವಾ ಎಂದರೆ ಕುಮಟಾ ಶಹರದಲ್ಲಿ ಎಲ್ಲಾ ಬೆನ್ನಟ್ಟಿ ಹೋದ ಬಗ್ಗೆ ನಮೂದಿಸಲಾಗಿರುತ್ತದೆ . ಆದರೆ ಎಲ್ಲಿಂದ ಯಾವ ಮಾರ್ಗವಾಗಿ ಅವನನ್ನು ಬೆನ್ನಟ್ಟಿ ಹೋದೆವು ಎಂದು ಬರದಿಲ್ಲ. ಆರೋಪಿಯನ್ನು ಹಿಡಿದ ಜಾಗದಲ್ಲಿ ನಮ್ಮ ಅಧಿಕಾರಿ ಹಾಗೂ ಸಿಬ್ಬಂದಿಯವರು , ಪಂಚರು , ಫಿರ್ಯಾದಿ ಇದ್ದೆವು. ಒಟ್ಟು 7 ಜನ ಸಿಬ್ಬಂದಿ ಇದ್ದೆವು. ಪಂಚರು ಮತ್ತು ಫಿರ್ಯಾದಿ ಮತ್ತು ಅಧಿಕಾರಿ ಸೇರಿಸಿ 11 ಜನ ಇದ್ದೆವು . ಒಂದು ಇಲಾಖಾ ಜೇಪ್ ನಲ್ಲಿ 8 ಜನ ಕುಳಿತುಕೊಳ್ಳಬಹುದು . ಆರೋಪಿ ಇದ್ದ ಜೇಪ್ ನಲ್ಲಿ ಒಟ್ಟು ಎಷ್ಟು ಜನ ಇದ್ದರು ಎಂದು ಗೊತ್ತಿಲ್ಲ. 11 ಜನ ಎಂದು ನಾನು ಉತ್ತರವನ್ನು ನೀಡುವಾಗ ನಾನು ಸಿಕ್ಕಿ ಹಾಕಿಕೊಳ್ಳುತ್ತೇನೆ ಎಂದು ತಿಳಿದು ಉತ್ತರ ನೀಡಿದ್ದೇನೆ ಎಂದರೆ ಸರಿಯಲ್ಲ. ಪಂಚರು ಆರೋಪಿ ಇದ್ದ ಜೇಪ್ ನಲ್ಲಿ ಇದ್ದರು. ತನಿಖಾಧಿಕಾರಿ ಆರೋಪಿ ಇದ್ದ ಜೇಪ್ ನಲ್ಲಿ ಇದ್ದರು. ಎಷ್ಟು ಜನ ಪೊಲೀಸ್ ನವರು ಆರೋಪಿ ಇದ್ದ ಜೇಪ್ ನಲ್ಲಿ ಎಂದರೆ

ಅಧಿಕಾರಿ ಅಲ್ಲದೇ ಇನ್ನಿಬ್ಬರು ಸಿಬ್ಬಂದಿ ಆ ಜೀಪ್ ನಲ್ಲಿ ಇದ್ದರು. ಜೀಪ್ ಗೆ ಬೇರೆ ಚಾಲಕ ಇದ್ದ. ಜೀಪ್ ನಲ್ಲಿ 6 ಕ್ಕಿಂತ ಹೆಚ್ಚು ಜನ ಇದ್ದರೆ ಅಂಗಸ್ಪರ್ಶ ಆಗುವ ಸಾಧ್ಯತೆ ಇರುತ್ತದೆ ಎಂದರೆ ಇರಬಹುದು . ಆರೋಪಿಯನ್ನು ಹಿಡಿದ ಸ್ಥಳದಿಂದ ಪ್ರವಾಸಿ ಮಂದಿರಕ್ಕೆ ಹೋಗಲು 10 ರಿಂದ 15 ನಿಮಿಷ ಸಮಯ ಹಿಡಿದಿರುತ್ತದೆ . ರಾತ್ರಿ 8.40 ಗಂಟೆಗೆ ಆರೋಪಿಯನ್ನು ದಸ್ತಗಿರಿ ಮಾಡಲಾಗಿರುತ್ತದೆ . ಪ್ರವಾಸಿ ಮಂದಿರಕ್ಕೆ ಆರೋಪಿಯನ್ನು ಹಿಡಿದ ಸುಮಾರು 15 ನಿಮಿಷಕ್ಕೆ ತಲುಪಿರುತ್ತೇವೆ.

7. ಪ್ರವಾಸಿ ಮಂದಿರಕ್ಕೆ ಹೋದ ತಕ್ಷಣ ಏನು ಘಟನಾವಳಿ ಮಾಡಿದರು ಎಂದರೆ ಆರೋಪಿತನ ಎರಡೂ ಕೈಗಳನ್ನು ಫಿನಾಪ್ತಲಿನ್ ಪುಡಿ ಹಾಕಿ ದ್ರಾವಣವನ್ನು ತಯಾರಿಸಿ ಆರೋಪಿಯ ಬಲಗೈಯನ್ನು ಅದರಲ್ಲಿ ಅದ್ದಿದರು . ಆಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಬಂತು . ನಂತರ ಆರೋಪಿಯ ಎಡಗೈಯನ್ನು ದ್ರಾವಣದಲ್ಲಿ ಅದ್ದಿದಾಗ ಅದೂ ಸಹ ತಿಳಿ ಗುಲಾಬಿ ಬಣ್ಣ ಬಂತು. ಈ ಪ್ರಕ್ರಿಯೆ ಮಾಡಲು 15 ರಿಂದ 20 ನಿಮಿಷ ಹಿಡಿದಿರಬಹುದು . ನಂತರ ಆರೋಪಿಯ ಪ್ಯಾಂಟ್ ಅನ್ನು ಅವನ ತಮ್ಮನ ಕಡೆಯಿಂದ ಬೇರೆ ಪ್ಯಾಂಟ್ ತರಿಸಿ ಬದಲಾಯಿಸಿ ಅವನು ಧರಿಸಿದ್ದ ಪ್ಯಾಂಟ್ ಪಡೆದು ಅದರ ಕಿಸೆಯನ್ನು ತಯಾರಿಸಿದ ದ್ರಾವಣದಲ್ಲಿ ಅದ್ದಿದಾಗ ಅದು ಸ್ವಲ್ಪ ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತು . ಅದನ್ನು ಜಪ್ತು ಮಾಡಿ ಮೊಹರು ಮಾಡಿ ತೆಗೆದುಕೊಂಡರು. ಅದಕ್ಕೆ ಅಂದಾಜು ಅರ್ಧ ಗಂಟೆ ಸಮಯ ಹಿಡಿಯಿತು . ನಂತರ ಆರೋಪಿಯ ಸ್ವಖುಷಿ ಹೇಳಿಕೆಯನ್ನು ತನಿಖಾಧಿಕಾರಿ ಪಡೆದರು. ಅದಕ್ಕೆ ಅಂದಾಜು ಅರ್ಧ ಗಂಟೆ ಸಮಯ ಹಿಡಿದಿರಬಹುದು . ನಂತರ ಆರೋಪಿಯ ಬೈಕ್ ನಲ್ಲಿ ಇದ್ದ ದಾಖಲಾತಿಗಳನ್ನು ವಶಪಡಿಸಿಕೊಂಡರು. ಅದಕ್ಕೆ ಸುಮಾರು ಒಂದು ತಾಸು ಹಿಡಿಯಿತು . ಆ ದಾಖಲಾತಿಗಳನ್ನು ಆರೋಪಿಯ ಬೈಕ್ ನಿಂದ ವಶಪಡಿಸಿಕೊಂಡಾಗ ಆರೋಪಿಯ ಬೈಕ್ ಅನ್ನು ನಮ್ಮ ಠಾಣಾ ಆರಕ್ಷಕ ಪೇದೆ ಸುದರ್ಶನ ನಾಯ್ಕ ಹೆರವಟ್ಟಾದಿಂದ ಪ್ರವಾಸಿ ಮಂದಿರಕ್ಕೆ ತಂದಿದ್ದರು. ಆರೋಪಿಯನ್ನು ಹಿಡಿದ ಸ್ಥಳದಿಂದ ಆರೋಪಿಯನ್ನು ಕರೆದುಕೊಂಡು ಬರುವಾಗಲೇ ಸುದರ್ಶನ ನಾಯ್ಕ ಆರೋಪಿಯ ಬೈಕ್ ಅನ್ನು ಚಲಾಯಿಸಿಕೊಂಡು ಪ್ರವಾಸಿ ಮಂದಿರದ ಬಳಿ ತಂದು ತನಿಖಾಧಿಕಾರಿ ಮುಂದೆ ಹಾಜರು ಪಡಿಸಿದರು. ತನಿಖಾಧಿಕಾರಿ ಮುಂದೆ ಹಾಜರುಪಡಿಸಿದ ಮೇಲೆ ಪ್ರವಾಸಿ ಮಂದಿರದ ಆವರಣದಲ್ಲಿ ಆ ಬೈಕ್ ಅನ್ನು ಇಟ್ಟಿದ್ದರು. ಟ್ರ್ಯಾಪ್

ಪಂಚನಾಮೆ ಮಾಡುತ್ತಿದ್ದ ಸ್ಥಳದಿಂದ ಆ ಬೈಕ್ ನಿಲ್ಲಿಸಿದ್ದ ಸ್ಥಳಕ್ಕೆ 10–15 ಮೀಟರ್ ದೂರ ಇತ್ತು. 10–15 ಮೀಟರ್ ದೂರದಲ್ಲಿ ಇರುವ ಬೈಕ್ ನಿಂದ ದಾಖಲಾತಿಗಳನ್ನು ತಂದು ಅದರ ವಿವರ ನಮೂದಿಸಲು ಒಂದು ತಾಸು ಬೇಕಾಗಿಲ್ಲ ಎಂದರೆ ಹೌದು . ಬೈಕ್ ನಿಂದ ದಾಖಲಾತಿಗಳನ್ನು ಆರೋಪಿಯೇ ಹೊರ ತೆಗೆದು ಕೊಟ್ಟಿರುತ್ತಾನೆ . ಬೈಕ್ ನಿಂದ ದಾಖಲಾತಿ ತೆಗೆಯಲು 5 ರಿಂದ 10 ನಿಮಿಷ ಸಾಕಾಗಿರುತ್ತದೆ ಎಂದರೆ ಹೌದು . ನಂತರ ಪಂಚನಾಮೆಯಲ್ಲಿ ಅದನ್ನು ಬರೆದರು. ಗುನ್ಹಾ ಸ್ಥಳದ ನಕ್ಷೆ ತಯಾರಿಸಿದರು. ನಕ್ಷೆ ತಯಾರಿಸಲು ಎಷ್ಟು ಸಮಯ ಹಿಡಿಯಿತು ಎಂದು ತನಿಖಾಧಿಕಾರಿಗೆ ಗೊತ್ತು ಸುಮಾರು ಅರ್ಧ ಗಂಟೆ ಸಮಯ ಆಗಿದೆ ಎಂದು ಅಂದಾಜಿನಲ್ಲಿ ನಾನು ಹೇಳುತ್ತೇನೆ. ಪ್ರವಾಸಿ ಮಂದಿರಕ್ಕೆ ಬಂದಾಗಿನಿಂದಲೇ ಪಂಚನಾಮೆ ಬರವಣಿಗೆ ಪ್ರಾರಂಭ ಮಾಡಿದರು. 20–40 ಗಂಟೆಗೆ ಪ್ರಾರಂಭ ಮಾಡಿ ರಾತ್ರಿ 1.00 ಗಂಟೆವರೆಗೆ ಪಂಚನಾಮೆ ಮಾಡಲು ಅಷ್ಟು ಅವಧಿ ಬೇಕಾಗಿಲ್ಲ ಎಂದರೆ ಸರಿಯಲ್ಲ. ಆರೋಪಿ ಮೇಲೆ ಸುಳ್ಳು ಕೇಸು ಹೇಗೆ ಹಾಕಬಹುದು ಎಂದು ಚರ್ಚೆ ಮಾಡಿ ನಿರ್ಣಯಿಸಲು ಅಷ್ಟು ಸಮಯ ತೆಗೆದುಕೊಂಡಿದ್ದೇವೆ ಎಂದರೆ ಸರಿಯಲ್ಲ.

8. ಆರೋಪಿಯನ್ನು ಹಿಡಿದ ಜಾಗದಲ್ಲಿ ಸುತ್ತಮುತ್ತಲೂ ಸುಮಾರು ಮನೆಗಳು ಇವೆ ಎಂದರೆ ಹೌದು . ಶಾಂತಿಕಾ ಪರಮೇಶ್ವರಿ ದೇವಸ್ಥಾನದ ಬಳಿ ಆರೋಪಿಯನ್ನು ಹಿಡಿದಾಗ ಎಷ್ಟು ಸಮಯ ಕಳೆದೆವು ಎಂದರೆ ದುಡ್ಡನ್ನು ಆರಿಸಿ ವಶಪಡಿಸಿಕೊಂಡು ತನಿಖಾಧಿಕಾರಿ ಅದನ್ನು ತೆಗೆದುಕೊಳ್ಳಲು ಸೇರಿ ಅಲ್ಲಿ ಸುಮಾರು 15 ನಿಮಿಷ ಸಮಯ ಆಗ ಹಿಡಿಯಿತು . ಆ ಸಮಯದಲ್ಲಿ ಆರೋಪಿ ಕಿರಿಚಾಡಲಿಲ್ಲ. ಆರೋಪಿ ಆಗ ಅಲ್ಲಿಂದ ಓಡಿ ಹೋಗಲು ಪ್ರಯತ್ನ ಪಟ್ಟನಾ ಎಂದರೆ ನಮ್ಮ ಸಿಬ್ಬಂದಿ ಆರೋಪಿಯ ಎರಡೂ ಕೈಗಳನ್ನು ಹಿಡಿದುಕೊಂಡರು ಆರೋಪಿ ಓಡಿ ಹೋಗಲು ಪ್ರಯತ್ನ ಮಾಡಲಿಲ್ಲ. ಅಲ್ಲಿ ಸಾರ್ವಜನಿಕರು ಎಷ್ಟು ಜನ ಸೇರಿದ್ದರು ಎಂದು ಹೇಳಲು ಆಗುವುದಿಲ್ಲ. ಅಲ್ಲಿ ಸಾರ್ವಜನಿಕರು ಇದ್ದರು. ಸಾರ್ವಜನಿಕರ ಹೇಳಿಕೆಯನ್ನು ತನಿಖಾಧಿಕಾರಿ ಪಡೆಯಲಿಲ್ಲ. ಪ್ರವಾಸಿ ಮಂದಿರದಲ್ಲಿ ಯಾವುದೇ ಕೊಠಡಿ ತೆಗೆದುಕೊಳ್ಳಬೇಕಾದರೆ ಪ್ರವಾಸಿ ಮಂದಿರದ ಅನುಮತಿ ಬೇಕಾಗುತ್ತದೆ ಎಂದರೆ ತನಿಖಾಧಿಕಾರಿಯವರು ಅನುಮತಿ ಪಡೆದಿರಬಹುದು . ಪ್ರವಾಸಿ ಮಂದಿರದ ಸಿಬ್ಬಂದಿ ಅಲ್ಲಿ ಇದ್ದರು. ಯಾವುದೇ ಟ್ರ್ಯಾಪ್ ಪಂಚನಾಮೆ ನನ್ನ ಸಮಕ್ಷಮ ಆಗಿಲ್ಲ ಎಂದರೆ ಸರಿಯಲ್ಲ.

ಫಿರ್ಯಾದಿ ಹಾಗೂ ಪಂಚ–1 ಆರೋಪಿ ಇರುವ ತಾಲೂಕು ಪಂಚಾಯತಿ ಕಚೇರಿ ಕುಮಟಾ ಒಳಗೆ ಹೋಗಿದ್ದನ್ನು ನಾನು ನೋಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದಿ ತೋರಿಸಿದ ಕರವಸ್ತ್ರವನ್ನು ತನಿಖಾಧಿಕಾರಿ ವಶಪಡಿಸಿಕೊಂಡರಾ ಎಂದು ಗೊತ್ತಿಲ್ಲ. ಆರೋಪಿಯನ್ನು ಹುಡುಕಾಡಿದೆವು ಮತ್ತು ಬೆನ್ನಟ್ಟಿದೆವು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಶಾಂತಿಕಾ ಪರಮೇಶ್ವರಿ ದೇವಸ್ಥಾನದ ಹತ್ತಿರ ಗಿಡಗಂಟಿಯಲ್ಲಿ ಆರೋಪಿ ಹಣವನ್ನು ಬಿಸಾಡಿದ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಪಂಚ–1 ರವರ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿರುವುದಿಲ್ಲ. ಶಾಂತಿಕಾ ಪರಮೇಶ್ವರಿ ದೇವಸ್ಥಾನದ ಹತ್ತಿರ ಬೆಳಕಿನ ಅಭಾವ ಇತ್ತು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಎರಡೂ ಕೈಗಳನ್ನು ಸಿಬ್ಬಂದಿ ಹಿಡಿದುಕೊಂಡು ಕರೆ ತಂದರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಆರೋಪಿಯ ಕೈಗಳನ್ನು ಅದ್ದಿಸಿದರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ಅದ್ದಿಸಿದಾಗ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಪ್ಯಾಂಟ್ ಅನ್ನು ತರಿಸಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಧರಿಸಿದ್ದ ಪ್ಯಾಂಟ್ ಕಿಸೆಯನ್ನು ದ್ರಾವಣದಲ್ಲಿ ಅದ್ದಿದಾಗ ತಿಳಿ ಗುಲಾಬಿ ಬಣ್ಣಕ್ಕೆ ದ್ರಾವಣ ಪರಿವರ್ತನೆಯಾಯಿತು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಪ್ರವಾಸಿ ಮಂದಿರದಲ್ಲಿ ಯಾವುದೇ ರಾಸಾಯನಿಕ ಪ್ರಕ್ರಿಯೆ ಮಾಡಿಲ್ಲ ಎಂದರೆ ಸರಿಯಲ್ಲ. ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಫಿರ್ಯಾದಿಯ ಬಳಿ ಇದ್ದ ವಾಯ್ಸ ರೆಕಾರ್ಡರ್ ನಲ್ಲಿ ಸಂಭಾಷಣೆ ಅಸ್ಪಷ್ಟವಾಗಿತ್ತು ಎಂದು ಹೇಳಿದ್ದು ಅಸ್ಪಷ್ಟ ಎಂದರೆ ಕೆಲವೊಂದು ಶಬ್ದ ಕೇಳುವುದು ಕೆಲವೊಂದು ಶಬ್ದ ಕೇಳದೇ ಇರುವುದು ಆಗಿರುತ್ತದೆ ಎಂದರೆ ಹೌದು . ಆ ದಿನ ಆ ಸಂಭಾಷಣೆಯಲ್ಲಿ ಕೇಳಿದ ಶಬ್ದಗಳು ಯಾವುದು ಎಂದರೆ ಅದು ಸರಿಯಾಗಿ ಕೇಳಿಸಲಿಲ್ಲ. ಸಂಭಾಷಣೆಯಲ್ಲಿ ಕೇಳಿಸಿದ ಪದಗಳನ್ನು ಬರೆದುಕೊಂಡಿದ್ದಾರಾ ಎಂದರೆ ಬರೆದುಕೊಂಡಿದ್ದಾರೆ. ಅದನ್ನು ಟ್ರ್ಯಾಪ್ ಪಂಚನಾಮೆಯಲ್ಲಿ ಬರೆದಿಲ್ಲ. ನಾನು ಹೇಳಿದಂತೆ ವಾಯ್ಸ ರೆಕಾರ್ಡರ್ ನ್ನು ಫಿರ್ಯಾದಿಗೆ ಕೊಟ್ಟಿರಲಿಲ್ಲ ಮತ್ತು ಯಾವುದೇ ಸಂಭಾಷಣೆಯನ್ನು ಆರೋಪಿ ಜೊತೆ ಧ್ವನಿ ಮುದ್ರಣ ಮಾಡಿಕೊಂಡಿರಲಿಲ್ಲ ಎಂದರೆ ಸುಳ್ಳು. ಯಾವುದೇ ಛಾಯಾಚಿತ್ರ ತೆಗೆದಿಲ್ಲ ಎಂದರೆ

ಸರಿಯಲ್ಲ. ಕಚ್ಚಾ ನಕಾಶೆಯನ್ನು ಪ್ರವಾಸಿ ಮಂದಿರದಲ್ಲಿ ತಯಾರಿಸಿದರು. ಅದಕ್ಕೆ ನಾನು ರುಜು ಮಾಡಿಲ್ಲ. ಯಾವುದೇ ಕಚ್ಚಾ ನಕಾಶೆಯನ್ನು ಎಲ್ಲಿಯೂ ತಯಾರು ಮಾಡಿಲ್ಲ ಎಂದರೆ ಸುಳ್ಳು. ನ್ಯಾಯಾಲಯದ ಮುಂದೆ ಇರುವ ಎಲ್ಲಾ ಮುದ್ದೆ ಮಾಲನ್ನು ಲೋಕಾಯುಕ್ತ ಕಚೇರಿಗೆ ಬಂದು ನಮಗೆ ಬೇಕಾದಂತೆ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸುಳ್ಳು . ಶಾಂತಿಕಾ ಪರಮೇಶ್ವರಿ ದೇವಸ್ಥಾನದ ಹತ್ತಿರ ಮತ್ತು ಪ್ರವಾಸಿ ಮಂದಿರದಲ್ಲಿ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸುಳ್ಳು. ಆರೋಪಿ ನಾನು ಹೇಳಿದ ಯಾವುದೇ ಕೃತ್ಯ ಮಾಡದೇ ಇದ್ದರೂ ನನ್ನ ಮೇಲಾಧಿಕಾರಿಯವರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಶಿಕ್ಷೆ ಕೊಡಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ